SATYAVADI Founded 1917 Regd. No. M. 1299

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟುದು)

ಸಂಪುಟ 29 ಸಂಚಿಕೆ 152] ಸೋಮವಾರ 18—2—46 [ಬಿಡಿ ಪ್ರತಿ 6 ಪೈ

ಲಂಚದ ಪುರಾಣ

ಎಲ್ಲಿ ಹೋದರೆ ಅಲ್ಲಿ 'ಲಂಚ, ಲಂಚ' ಎನ್ನುತ್ತಾರೆ. ಎಲ್ಲೆಲ್ಲಿ ನೋಡಿದರೂ ಈ ಲಂಚದ ಕತೆಗಳೇ ಹೆಚ್ಚಾಗಿವೆ. ಈ ಲಂಚ ಅಂದರೇನು? ಇದರ ಹುಟ್ಟುಬೆಳವಣಿಗೆಗಳೆಲ್ಲಾ ಎಲ್ಲಿ? ಇದರ ಆಕಾರವೇನು? ಎಂಬುದನ್ನೆಲ್ಲಾ ತಿಳಿದುಕೊಳ್ಳಬೇಕೆಂದು ನನಗೆ ಆಸೆ.

ಎಲ್ಲೆಲ್ಲಿ ನೋಡಿದರೂ ಇದರ ಅಸ್ತಿತ್ವ ಪ್ರಭಾವ ಎಲ್ಲವೂ ಇದೆ. ಸರ್ವಾಂತರ್ಯಾಮಿಯಾದ ಪರಮಾತ್ಮನಂತೆ ಈ ಲಂಚವೂ ಸರ್ವವ್ಯಾಪಿಯಾಗಿರುತ್ತದೆ. ಆದರೂ ಇದರ ಕುಲ, ಗೋತ್ರ, ಹುಟ್ಟುಬೆಳವಣಿಗೆಗಳು ಯಾರಿಗೂ ತಿಳಿಯದು. ಅದೇ ಅದರ ಸ್ವಾರಸ್ಯ!

ಅದರ ಕುಲ ಗೋತ್ರಗಳನ್ನು ತಿಳಿದುಕೊಳ್ಳಬೇಕೆಂದು ನಾನೂ ತುಂಬಾ ಪ್ರಯತ್ನಿಸಿದೆನು. ವೇದ, ಶಾಸ್ತ್ರ, ಪುರಾಣ ಇತಿಹಾಸ ಮೊದಲಾಗಿ ಯಾವತ್ತೂ ಗ್ರಂಥಗಳನ್ನು ತಿರುವಿ ಹಾಕಿದೆನು. ಈ ಹಾಳು 'ಲಂಚ' ಎಂಬ ಶಬ್ದ ಯಾವ ದುಲ್ಲಾದರೂ ಇರಬೇಡವೇ? ಊಹುಂ. ಒಂದು ಪುಸ್ತಕದಲ್ಲಿಯೂ ಇಲ್ಲ!

ಆ ಶಬ್ದವು ಯಾವ ಗ್ರಂಥದಲ್ಲಿಯೂ ಇಲ್ಲದಿದ್ದರೂ ಅದರ ಅಸ್ತಿತ್ವವನ್ನು ಮಾತ್ರ ಯಾರೂ ಅಲ್ಲಗಳೆಯುವಂತಿಲ್ಲ. ಎಲ್ಲರಲ್ಲಿಯೂ ಅದು ಇದ್ದೇ ಇದೆ. ಅಂಥ ವ್ಯಾಪಕತ್ವವಾದುದು ಅದು.

ನಮ್ಮಲ್ಲಿರುವ ಗ್ರಂಥಗಳನ್ನೆಲ್ಲಾ ಹುಡುಕಿದುವಾಗ, ಹಳೆಯ ಕಡತ ಒಂದು ಸಿಕ್ಕಿತು. ಸೊಗಸಾದ ಕಡತ ಅದು. ನಿಮಗೆ ಯಾವ ವಿಷಯ ಬೇಕಾದರೂ ನೋಡಿ ಅದರಲ್ಲಿ ಸಿಕ್ಕುತ್ತೆ ಎಲ್ಲೆಲ್ಲೂ ಇಲ್ಲದೇ ಇರುವ ವಿಷಯವೆಲ್ಲಾ ಆ ಕಡತದಲ್ಲಿದೆ ಅಂಥ ಭಾರ ಉಳ್ಳ ಸ್ತವಾದ ಮತ್ತು ಮಹತ್ವದ ಕಡತ ಅದು. ನನ್ನ ಪಾಲಿಗೆ ನಿಮ್ಮೆಲ್ಲರ ಪಾಲಿಗೂನೂ, ಅದೇ ಮಹಾಭಾರತ, ಅದೇ ರಾಮಾಯಣ, ಭಾಗವತ ಎಲ್ಲವೂ ಅದೇ. ಇವು ಯಾವುದರಲ್ಲಿಯೂ ಇಲ್ಲದಂಥ ವಿಷಯವೆಲ್ಲಾ ಅದರಲ್ಲಿ ಇದೆ ನೋಡಿರಿ.

ಪುಸ್ತಕವನ್ನು ಬಿಚ್ಚಿ ನೋಡುವಾಗಲೇ, ಮೊದಲನೆಯ ಪುಟದಲ್ಲಿಯೇ ಈ ಹಾಳು 'ಲಂಚ' ದ ಮಹಿಮೆಯೇ ಇರಬೇಕೇ? ಅದೂ ಏನು? ಬಹು ಸ್ವಾರಸ್ಯವಾಗಿ, ಏನೇನು ಬೇಕು, ಲಂಚದ ವಿಷಯವಾಗಿ ಅದೆಲ್ಲವೂ ಆ ದಸ್ತಿಲ್ಲದೆ ಅಂಥ ಭಾರಿಗ್ರಂಥ ಅದು.

ಭಾರಿಗ್ರಂಥವೆಂದರೆ ಸಾವಿರಾರು ಪುಟಗಳಿರುವ ದೊಡ್ಡ ಪುಸ್ತಕ ಅಂತ ತಿಳಿಯಬೇಡಿರಿ. ಪುಸ್ತಕ ಬಹಳ ಚಿಕ್ಕದು. ಎಲ್ಲಾ ಸೂತ್ರರೂಪವಾಗಿಯೇ ಇದೆ. ತಿಳಿದುಕೊಳ್ಳಬೇಕಾದು.

ಭಾರತದಲ್ಲಿ ಆಹಾರಾಭಾವ

ಪೌರಸಭಾಧಿವೇಶನ

ಇದೇ ತಾ॥ 23 ರಲ್ಲಿ ಮೈಸೂರು ಪೌರಸಭೆಯ ಸಾಧಾರಣ ಸಭೆಯು ನಾಲ್ಕು ಘಂಟೆಗೆ ಸೇರುವುದು.

ಯಾವ ಗ್ರಂಥಕ್ಕಾ ಪ್ರಾರಂಭದಲ್ಲಿ ಮಂಗಳಾಚರಣೆ ಯಿರುವುದು ನಮ್ಮಲ್ಲಿ ಹಳೆಯಕಾಲದ ಸಂಪ್ರದಾಯ. ಆ ಸಂಪ್ರದಾಯ ಆ ಗ್ರಂಥದಲ್ಲಿಯೂ ಅನುಸರಿಸಿದ್ದಾರೆ.

ಆ ಹಳೆಯ ಸಂಪ್ರದಾಯ ಅನುಸರಿಸಿರುವುದರಿಂದ ಆ ಗ್ರಂಥಕ್ಕೆ 'ಲಂಚ ಪುರಾಣ' ಅಂತ ನಾಮಕರಣ ಮಾಡಿರುತ್ತೇನೆ.

ಯಾಕೋ ಪೀಠಿಕೇನೇ ಬಹಳ ಉದ್ದವಾಗಿ ಹೋಯಿತಲ್ಲಾ ಎಂದು ತಿಳಿದುಕೊಳ್ಳಬೇಡಿರಿ. ಪುರಾಣದ ಅರ್ಥ ಬಿಡಿಸಿ ಹೇಳಬೇಕಾದರೆ, ಅದುಲ್ಲಿಯೂ ಗೂಢವಾದುದನ್ನು ಸರಿಯಾಗಿ ವಿವರಣೆ ಮಾಡಿ ತಿಳಿಸಬೇಕಾದರೆ ಪೀಠಿಕೆಯು ಸರಿಯಾಗಿಯೇ ಇರಬೇಕು. ಇಲ್ಲವಾದರೆ ಉಪಯೋಗವಿಲ್ಲ. ಅದರಲ್ಲಿಯೂ ಮೊಟ್ಟಮೊದಲನೆಯ ಮಂಗಳಾಚರಣೆಯು ಹೀಗಿದೆ.

'ಲಂಚಕೋರ ಭ್ರಾಂಜೋತಿನರೆಲ್ಲಾ ಲಂಚವಿತ್ತವರ ವಂಚಿಪರಲ್ಲ. ಲಂಚ ವಿಳಿಯದ ಮನುಜಸಿಗೆಲ್ಲಾ ಕೊಂಚದಲ್ಲಿ ಡತಕ್ಕವರಲ್ಲ' ಇದೇ ಆ ಗ್ರಂಥದ ಮಂಗಳಾಚರಣೆಯ ಶ್ಲೋಕ. ತಮಗೆಲ್ಲರಿಗೂ ಅರ್ಥವಾಗಿರಬೇಕು. ಎಷ್ಟು ಸ್ವಾರಸ್ಯವಾಗಿದೆ ನೋಡಿರಿ. ನೀವು ತಿಳಿದಿರುವುದಕ್ಕಿಂತಲೂ ಹೆಚ್ಚಿನ ಅರ್ಥ ಅದರಲ್ಲಿದೆ. ಅವನ್ನೆಲ್ಲಾ ನಾನೇ ವಿವರಿಸಬೇಕು. ಅತುರ ಪಡಬೇಡಿರಿ

(ಕಡೇ ಪುಟ ನೋಡಿ)

ನವದೆಹಲಿಯಲ್ಲಿ ತಾ॥ 16 ರಲ್ಲಿ ವೈಸರಾಯರು ಮೇಲ್ಕಂಡ ವಿಷಯದಲ್ಲಿ ಆಕಾಶವಾಣಿ ಭಾಷಣಮಾಡಿ ಉಗ್ರ ಪರಿಸ್ಥಿತಿಯನ್ನು ವಿವರಿಸಿ ಅಭಾವ ಸರಿಪಡಿಸಲು ಸಲಹೆಯಿತ್ತು ಆಹಾರ ಇಲಾಖೆಯೊಡನೆ ಸಹಕರಿಸಬೇಕೆಂದು ವಿನಂತಿ ಮಾಡಿಕೊಂಡಿರುವರು.

ಂ ಂ

ಬಟೇವಿಯಾ, ಫೆ 15 — ಕೆನಡಾದ ಆಟಂ ಬಾಂಬಿನ ಗುಟ್ಟು ರಟ್ಟಾಗಿರುವುದೆಂದು ಹಲವರ ದಸ್ತಗಿರಿಯಾಗಿವೆ.

ಂ ಂ

ಚಿಕ್ಕಮಗಳೂರು, ಫೆ 13 — ತರೀಕೆರೆ ತಾಲ್ಲೂಕಿನ ಹುಣಸೆ ಕಟ್ಟಡದ ಜನರು ನೀರಿಲ್ಲದೆ ನರಳುತ್ತಿದ್ದ ಹರಿಜನರ ನೋಡಿ ಕೊರಗಿ ತನ್ನ ಭಾವಿಯಲ್ಲಿ ಅಪಾರ ನೀರು ನೀರು ಕೆಗೆದುಕೊಳ್ಳುವಂತೆ ಅವಕಾಶನಿತ್ತಿರುವರು.

ಂ ಂ

ಕೈಸರರ ನೌಮ್ಮಗನು ತನ್ನಲ್ಲಿಯ ರೇಡಿಯೋ ಸಲಕರಣೆಗಳ ದಾಸ್ತಾನನ್ನು ತಿಳಿಸಲು ನಿರಾಕರಿಸಿದ್ದಕ್ಕಾಗಿ ದಸ್ತಗಿರಿಯಾದನು.

॥ ವಂದೇಮಾತರಂ॥

ಶ್ರೇಷ್ಠವಾದ

ರಾಜಪುರಿ ಹೊಗೇಸೊಪ್ಪಿನಿಂದ

— ತಯಾರಿಸಲ್ಪಟ್ಟ —

ಕಾಂಗ್ರೆಸ್

(ರಿಜಿಸ್ಟರ್ಡ್)

ಮಂಗಳೂರು ಬೀಡಿಗಳು

ಜೆ. ಎಸ್. ಟೊಬ್ಯಾಕೊ ವರ್ಕ್ಸ್

ಬಸ್ ಟರ್ಮಿನಸ್ ಮೈಸೂರು

ಈ ವಾರದ ಭವಿಷ್ಯ

(ಓಂ ಜೋತಿಷ್ಯರಿಂದ)

ಮೇಷ;— ಸಾಂಪತ್ತಿಕ ಶಾರೀರಿಕ ಲಾಭಗಳುಂಟು, ಮನಸ್ಸು ಸ್ಥಿಮಿತವಾಗಿರುತ್ತದೆ. ವ್ಯವಹಾರದಲ್ಲಿ ಜಯಪ್ರಾಪ್ತಿಯ ಸೂಚನೆಯಿದೆ, ಎತ್ತರ ಭೇಟಿಯೂ ವುಂಟು.

ವೃಷಭ;— ಮಾನಸಿಕ ಶಾಂತಿಯೂ ಆರೋಗ್ಯವೂ ಲಭಿಸುವವು, ಆದಾಯ ಕಡಿಮೆ; ಖರ್ಚು ಹೆಚ್ಚು, ಲಾಟರಿಗಳಿಗೆ ಹಣ ಹಾಕಬೇಡಿ.

ಮಿಥುನ;— ಮನೋಸ್ಥಿರತೆಯಿರುವುದಿಲ್ಲ; ದೇಹಾರೋಗ್ಯವೂ ಕಡಿಮೆ, ವ್ಯವಹಾರದಲ್ಲಿ ಕ್ಲೇಶ ಕಷ್ಟಗಳು ಕಾಣಬರುತ್ತವೆ.

ಸಿಂಹ;— ಆರೋಗ್ಯ ಲಾಭವುಂಟು, ಸಾಂಪತ್ತಿಕ ಲಾಭ ವುಂಟು; ಮನೋಸ್ಥಿರತೆ ಯುಂಟು; ವ್ಯವಹಾರದಲ್ಲಿ ಕೀರ್ತಿಯುಂಟು.

ಕನ್ಯ;— ಆರ್ಥಿಕವಾಗಿಯೂ, ವ್ಯವಹಾರದಲ್ಲಿಯೂ, ಶರೀರದ ವಿಷಯದಲ್ಲಿಯೂ ಇದುವರೆಗೆ ತೊಂದರೆಯಾಗಲಿ ಕಷ್ಟವಾಗಲಿ ಇರುವದಿಲ್ಲ.

ತುಲಾ;— ಆರೋಗ್ಯವಾಗುವ ಆರ್ಥಿಕಸ್ಥಿತಿಗಳು ಉತ್ತಮವಾಗಿರುತ್ತವೆ. ಯುಕ್ತಾ ಯುಕ್ತ ಜ್ಞಾನವಿಲ್ಲದೆ ಯಾರನ್ನೂ ನಂಬಬೇಡಿ. ವ್ಯವಹಾರದಲ್ಲಿ ಉತ್ತಮ ಸ್ಥಿತಿಯನ್ನು ತಲಪುವಿರಿ.

ವೃಶ್ಚಿಕ; ಆರ್ಥಿಕ ಲಾಭವಿರದು, ವ್ಯವಹಾರದಲ್ಲಿ ಜಾಗ್ರತೆಯಿಂದ ವರ್ತಿಸದಲ್ಲಿ ಉತ್ತಮ.

ಧನುಸ್ಸು;— ಮನೋಸ್ಥಿತಿ ಚನ್ನಾಗಿರಲಾರದು. ಆರೋಗ್ಯವೂ ಸೆಟ್ಟಿಗಿರದು ಆರ್ಥಿಕ ಕ್ಲೇಶವಿರುವುದಿಲ್ಲ.

ಮಕರ;— ಮನಸ್ಸು ಪ್ರಫುಲ್ಲಿತವಾಗಿಯೂ, ದೇಹವು ಆರೋಗ್ಯಕರವಾಗಿಯೂ ಇರುತ್ತದೆ, ಸಾಕಾದಷ್ಟು ಆರ್ಥಿಕ ಲಾಭವೂ ಇರುತ್ತದೆ. ವ್ಯವಹಾರದಲ್ಲಿ ಸುಖ ಸಂತೋಷಗಳೇ ಕಾಣಬರುತ್ತವೆ.

ಕುಂಭ;— ಮನೋಸ್ಥಿತಿ ಸೆಟ್ಟಗಿಲ್ಲದಿದ್ದರೂ ಆರೋಗ್ಯವು ಸರಿಯಾಗಿಯೇ ಇರುತ್ತದೆ. ಆರ್ಥಿಕವಾಗಿ ಅಷ್ಟು ಲಾಭವಿರದು.

ಮೀನ;— ಮಾನಸಿಕ, ಶಾರೀರಿಕ, ಆರ್ಥಿಕ, ವ್ಯವಹಾರಿಕ ವಿಷಯಗಳು ಸಾಮಾನ್ಯವಾಗಿರುತ್ತವೆ. ವ್ಯವಹಾರದಲ್ಲಿ ನಾಲ್ಕು ಕಡೆಯೂ ಕಣ್ಣಿಟ್ಟುಕೊಂಡಿರಬೇಕಾಗುತ್ತದೆ.

ಈ ವಾರದ ಕತೆ—

ರೈಲ್ವೇಂಪಿನಲ್ಲಿದ್ದಾಗ

ಲೇಖಕ— ಹೊ. ರಾ. ಕೃಷ್ಣರಾಯ.

.....

ಸಾಯಂಕಾಲ ಕಳೆದು ಕತ್ತಲೆಯು ಕಾಲೂರಿತು. ಅವೇಳೆಗೆ ಸರಿಯಾಗಿ ಗುಮಾಸ್ತ ಶಾಮಣ್ಣನೂ ಮನೆಯೊಳಗೆ ಕಾಲಿಟ್ಟನು. ಛಿದ್ರ ಛಿದ್ರವಾದ ಬಟ್ಟೆಯ ಪೇಟವನ್ನು ಎಡಗೈನಿಂದ ಮೇಲಕ್ಕೆ ತಳ್ಳಿ ನೆತ್ತಿಯ ಭಾಗವನ್ನು ಕೆರೆದುಕೊಳ್ಳುತ್ತಾ ನಿಂತನು. ಅಡಿಗೆಮನೆಯೊಳಗೆ ತಾಯಿಯು ಜೊತೆಯಲ್ಲಿ ಕುಳಿತಿದ್ದ ಕಿಟ್ಟು, ಶಾಮಿ, ಪಾರು ಓಡಿ ಬಂದು ಶಾಮಣ್ಣನನ್ನು ಸುತ್ತು ಕಟ್ಟಿಕೊಂಡು ಅಪ್ಪನೊಡನೆ ಸಲಿಗೆಯಿಂದಿದ್ದ ತೊಡಗಿದರು. ಅಂಗಿಯನ್ನು ಬಿಚ್ಚುತ್ತಿದ್ದಾಗ ಕಿರಿಯ ಮಗನಾದ ಕಿಟ್ಟು ಪಂಚೆಯನ್ನು ಹಿಡಿದು ಎಳೆದನು. ಅಂಗಿಯನ್ನು ಬಿಚ್ಚುತ್ತಿದ್ದ ಶಾಮಣ್ಣ ಇದನ್ನು ಸಹಿಸಲಾರದೆ ಬಿನಿಸಿನ ಮೇಲೆ ಎಂಡಿನ ಪಟ್ಟನ್ನು ಕೊಡಲು ಕಿಟ್ಟು ಅಳುತ್ತಾ ತಮ್ಮನಲ್ಲಿಗೆ ಹೋದನು. ತಾರದೆ, ಪಾರು, ಇದನ್ನರಿತು ತಂದೆಯೊಂದಿಗೆ ಕೊಂಚ ವಿನಯದಿಂದ ವರ್ತಿಸತೊಡಗಿದರು. ಅನಂತರ ಶಾಮಣ್ಣ ಅಂಗಿಯನ್ನು ಬಿಚ್ಚಿ ಕೈ ಕಾಲು ತೊಳೆದುಕೊಂಡು ಅಡಿಗೆಮನೆಯ ಕಡೆ ಹೋದನು. ಒಂದುಕಡೆ ಕಿಟ್ಟು ಬಿಕ್ಕಿ ಬಿಕ್ಕಿ ಅಳುತ್ತಾ ಕೂತಿದ್ದ. ಇನ್ನೊಂದೆಡೆ ಸುಧಾವನ ಮನೆಯ ಒಡತಿಯಾದ ಸುಬ್ಬಮ್ಮ, ಒಂದು ಸೀಸೆ ಸೀಮೆಎಣ್ಣೆ ಹುಯ್ದರೂ ಹೊತ್ತಿಕೊಳ್ಳದ ಹಸಿ ಸೌದೆಯಿಂದ ಹೊರಟ ಹೊಗೆಯಿಂದುಂಟಾದ ಕಣ್ಣೀರನ್ನು ಒರಸಿಕೊಳ್ಳುತ್ತಾ, ನೀರು ಕುದಿಯಿತೋ ಇಲ್ಲವೋ ಎಂದು ಅನ್ನದ ಪಾತ್ರೆಯ ಮುಚ್ಚಳವನ್ನು ತೆಗೆದು ತೆಗೆದು ನೋಡುತ್ತಿದ್ದಳು.

ಶಾಮಣ್ಣ ಇಪ್ಪತ್ತು ರೂಪಾಯಿ ಸಂಬಳ ತೆಗೆದುಕೊಳ್ಳುವ ಕಛೇರಿಯ ಸಣ್ಣ ಗುಮಾಸ್ತ, ನಾಲಕ್ಕು ಜನ ಹೆಣ್ಣುಮಕ್ಕಳ ಮದುವೆಮಾಡಿ ಮನೆಯಲ್ಲಾ ತೊಳೆದು ಹೋಯಿತು. ಇದ್ದ ಕೊಂಚ ಜವಿನಾಸೆಲ್ಲಾ ಮಾರಿದ್ದಾಯಿತು

ಈಗ ಶಾಮಣ್ಣ ಬಹಳ ನಿರ್ಗತಿಕ. ಅವನ ತಿಂಗಳಿಗೆ ಇಪ್ಪತ್ತು ರೂಪಾಯಿಯನ್ನು ತೆಗೆದುಕೊಂಡು ಜೀವನವನ್ನು ನಡೆಸಬೇಕಾಗಿದೆ. ಸುಬ್ಬಮ್ಮನ ರ ಸ್ವಭಾವ ಹಾಸಿಗೆ ಉದ್ದಕ್ಕೆ ಕಾಲು ಚಾಚಿಕೊಂಡಿರುವ ಸ್ವಭಾವ ಎಲ್ಲ ವಿಧದಲ್ಲೂ ಗಂಡನಿಗೆ ಸರಿಹೋಗಿಸಿ ಕೊಂಡಿದ್ದರು. ಏನಿದ್ದರೆ, ಏನು ತಂದರೆ, ಅದನ್ನು ಮೊಡಿಹಾಕಿಕೊಂಡು ಇರುತ್ತಿದ್ದರು. ಯಾವುದಕ್ಕೂ ಗಂಡನನ್ನು ಪೀಡಿಸುತ್ತಿರಲಿಲ್ಲ. ಒಟ್ಟಿನಲ್ಲಿ ಒಹಳ ಒಡತನದಿಂದ ಜೀವನವನ್ನು ನಡೆಸಿಕೊಂಡು ಹೋಗುತ್ತಿದ್ದರು. ಶಾಮಣ್ಣನೇನೊ ಒಳ್ಳೆಯವನಾಗಿದ್ದನು. ಆದರೆ ಆ ಒಳ್ಳೆಯತನ ಬಡತನವನ್ನು ಹೋಗಲಾಡಿಸುತ್ತದೆಯೇ ? ಅವನಿಗೇನೂ ಯೋಚನೆ ಇಲ್ಲದೇ ಇರುತ್ತಿರಲಿಲ್ಲ. ಹೆಂಡತಿಯನ್ನು ಕೈಹಿಡಿದ ಲಾಗಾಯಿತು ಒಂದು ದಿನ ಆಕೆಯನ್ನು ಸುಖದಿಂದ ಇಟ್ಟಿರಲಿಲ್ಲವಲ್ಲ, ಒಂದು ಒಡವೆ, ವಸ್ತು ತಂದು ಕೊಡಲಿಲ್ಲವಲ್ಲಾ ಎನ್ನುವ ಚಿಂತೆಯೇ ಸದಾ ಕಾಡಿಸುತ್ತಿದ್ದಿತು. ಆದರೆ ಅವನೇನು ಮಾಡಿಯಾನು, ದುಡ್ಡಿದ್ದರೆ ತಾನೆ ಮನುಷ್ಯ ಸುಖದಿಂದಿರಬೇಕಾದರೆ !

ಒಂದು ದಿನ ಹಾಗೆಯೇ ತನ್ನ ಹಳೆಯ ಆರಾಮ್‌ಕುರ್ಚಿಯ ಮೇಲೆ ಕುಳಿತಿರುತನು. ತನ್ನ ಬಾಲ್ಯದ ನೆನಪನ್ನು ಕೊಂಚ ತಂದುಕೊಂಡನು. ಆಗಾತನು ತನ್ನ ತಂದೆ ತಾಯಿಗೆ ಒಬ್ಬನೇ ಮಗನಾಗಿ ಸುಖವಾಗಿ ಬೆಳೆದುದು. ಆದರೆ ಈಗ ಅದೇ ಕಷ್ಟದಿಂದ ಇರುವುದು, ಎಲ್ಲವೂ ನೆನಪಿಗೆ ಬಂದು ಮನಸ್ಸನ್ನು ಕದಡಿತು ಈ ಬಡತನದಿಂದ ಪಾರಾಗುವ ವಿಚಾರವೇ ಗೊತ್ತಾಗಲಿಲ್ಲ. ಹಾಗೆ ಯೋಚಿಸುತ್ತಾ ಇರಲು ಕೊಂಚ ಜಂಪು ಹತ್ತಿತು,

(ಮುಂದಿನ ಸೋವವಾರ ನೋಡಿ)

ಗಾಂಧೀಜಿಯವರ ಸಲಹೆ

ವಾರ್ಧಾಗುಂಚ್ ಫ 12— ದೇಶದ ಆಹಾರ ದುಸ್ಥಿತಿಯನ್ನು ನಿವಾರಿಸಲು ರಾಷ್ಟ್ರೀಯ ಸರಕಾರ ಸ್ಥಾಪನೆಯೇ ಸಾಯಾದ ಮದ್ದು ಎಂದು ಗಾಂಧೀಜಿಯವರ ಸಲಹೆಯಾಗಿದೆ.

ನೋಟುಗಳ ಪ್ರಕರಣ

ನವ ದೆಹಲಿ ಫೆ. 12—ಜನವರಿ 11 ರಲ್ಲಿ 143,97,10,000 ರೂಗಳ ಹೆಚ್ಚು ಮೌಲ್ಯದ ನೋಟುಗಳು ಚಲಾವಣೆಯಲ್ಲಿದ್ದವೆಂದೂ ಜನವರಿ 12 ರಿಂದ 26 ರವರೆಗೆ ರಿಜರ್ವ್‌ಬ್ಯಾಂಕು ಮತ್ತು ಷೆಡ್ಯೂಲ್ಡ್ ಬ್ಯಾಂಕುಗಳ ಮೂಲಿಕ 101,70, 20, 500, ರೂಗಳ ಹೆಚ್ಚು ಮೌಲ್ಯದ ನೋಟುಗಳು ಬದಲಾಯಿಸಿತೆಂದೂ ಅಸೆಂಬ್ಲಿಯಲ್ಲಿ ಫೈನಾನ್ಸ್ ಮೆಂಬರು ತಿಳಿಸಿದರು.

ವಿವಿಧ ವರ್ತಮಾನ

ನವ ದೆಹಲಿ ಫೆ, 11—ಎಲ್ಲಾ ಐಎ.ಸ್. ಎ. ಜನರನ್ನು ಬಿಟ್ಟು ಬಿಡಬೇಕೆಂದು ಕೇಂದ್ರ ಅಸೆಂಬ್ಲಿಯು ಒತ್ತಾಯ ಪಡಿಸಲಾಯಿತು. ಈ ಸಂಬಂಧದಲ್ಲಿ ನ ಸರಕಾರದ ನೀತಿಯು ಖಂಡಿಸಲಾಯಿತು.

ಂ ಂ

ಚಿಕಾಗೋ ಫೆ, 11—ಪ್ರೆ|| ಟ್ರೂಮನ್ನರು 1948 ರ ಅಧ್ಯಕ್ಷ ಚುನಾವಣೆಯಲಿ ಉಮೇದುವಾರರಾಗಿ ನಿಲ್ಲುವುದಿಲ್ಲವೆಂದು ಹೇಳಲಾಗಿದೆ,

ಂ ಂ

ಮದರಾಸು ಫೆ, 12—ರೇಷನ್ನಿನಲ್ಲಿ ಶೇಕಡಾ 25 ಕೋತಾ ಮಾಡುವುದೆಂದರೆ 25 ಲಕ್ಷ ಟನ್ ಆಹಾರ ಉಳಿತಾಯವಾಗುವುದೆಂದು ಹೇಳಲಾಗಿದೆ

ಂ ಂ

ಡಬ್ಲಿನ್ ಫೆ, 11—ಮೈಸೂರು ಕಾಂಗ್ರೆಸಿನ ಮುಖಂಡರಾದ ಶ್ರೀ ಕೆ. ಸಿ. ರೆಡ್ಡಿಯವರು ಡಿವಿಲಾಲರವರನ್ನು ಭೇಟಿ ಮಾಡಿ ಮಾತುಕತೆ ನಡೆಸಿದರೆಂದು ತಿಳಿ ಬಂದಿದೆ.

ಂ ಂ

ಕಲ್ಲೀಕೋಟೆ, ಫೆ 9 — ಡಾ|| ಲೋಹಿಯಾ ಮಾಡಿದ ಭಾಷಣದಲ್ಲಿ ಪಾಕಿಸ್ತಾನವು ಇಸ್ಲಾಂ ಅನುಕೂಲಕ್ಕೆ ವಿರುದ್ಧವಾಗಿದೆ ಎಂದು ಹೇಳಿದರು.

ಂ ಂ

ಕೈರೋ, ಫೆ 10 — ಈಜಿಪ್ಟಿನಲ್ಲಿ ವಿದ್ಯಾರ್ಥಿಗಳು ಬ್ರಿಟಿಷರ ವಿರುದ್ಧ ಚಳುವಳಿ ಎಬ್ಬಿಸಿ ಪೆಂವಣಿಗೆ ನಡೆಸಿದಾಗ ಪೋಲಿಸರು ಗುಂಡು ಹಾರಿಸಿದರು

ಂ ಂ

ನವದೆಹಲಿ, ಫೆ 11 — ಭಾರತದ ಆಹಾರಾಭಾವ ವಿಷಯದಲ್ಲಿ ವೈಸ್ರಾಯರು ಭಾರತ ಮುಖಂಡರೊಡನೆ ಮಾತುಕತೆ ನಡೆಸುವರು. ಗಾಂಧೀಜೀ ಮತ್ತು ಜಿನ್ನಾರವರು ಸಲಹೆ ಕೇಳಿರುವರು.

ಂ ಂ

ನವ ದೆಹಲಿ ಫೆ, 10—ಯುದ್ಧದಲ್ಲಿ ವಿವಿಧ ಸೇವೆ ಸಲ್ಲಿಸಿದವರಿಗೆ ಪದಕಗಳನ್ನು ಕೊಡಲು ಸುಮಾರು 180 ಲಕ್ಷ ತೊಲ ಲೋಹ ಮತ್ತು 200 ಮೈಲಿ ಉದ್ದದಷ್ಟು ರಿಬ್ಬನ್‌ಗಳನ್ನು ಸಿದ್ಧಪಡಿಸಬೇಕೆಂದು ಇಂಡಿಯಾ ಸರ್ಕಾರದವರು ಆಜ್ಞಾಪಣೆ ಮಾಡಿದ್ದಾರೆ. ಈ ಸಾರಿ ಪದ್ಧತಿಯ ಪ್ರಕಾರ ಪದಕಗಳ ಮೇಲೆ ಅವನ್ನು ಪಡೆದವರ ಹೆಸರುಗಳನ್ನು ಕೆತ್ತಿಸಲಾಗುವುದಿಲ್ಲ.

ವಾರ್ಧಾ ಫೆ, 12—ಆಗಾಖಾನರು ಗಾಂಧೀಜಿಯವರನ್ನು ಈ ತಿಂಗಳು 20 ರಲ್ಲಿ ಭೇಟಿ ಮಾಡುವಾಗ ಅವರಿಗೆ ತಮ್ಮ ಅರಮನೆಯನ್ನು (ಈ ಅರಮನೆಯಲ್ಲೇ ಶ್ರೀ ಕಸ್ತೂರಿ ಬಾ ಮತ್ತು ಮಹದೇವ ದೇಸಾಯರೂ ಮೃತಪಟ್ಟದ್ದು) ಬಹು ಮಾನವಾಗಿ ಕೊಡಬಹುದೆಂದು ಹೇಳಲಾಗಿದೆ.

ಂ ಂ

ಮದರಾಸು ಫೆ, 1—ಅಕ್ಕಿಯು ಅಭಾವ ಹೆಚ್ಚಾಗಿರುವುದರಿಂದ ಜನರು 1 ಹೊತ್ತು ಊಟಮಾಡಿದರೆ ಅನುಕೂಲವೆಂದು ಪ್ರಕಟಿಸಿರುವುದಾಗಿ ತಿಳಿಯಬಂದಿದೆ.

ಂ ಂ

ತಮಗೆ ಅಲ್ಲಿ ಹಕ್ಕು ಬಾಧ್ಯತೆಗಳು ದೊರೆತಿಲ್ಲದಿರುವುದನ್ನು ಖಂಡಿಸಲು ಸಿಲೋನಿನಲ್ಲಿರುವ 7 ಲಕ್ಷ ಭಾರತೀಯರು ಹರತಾಳವನ್ನಾಚರಿಸಿದರು.

ಂ ಂ

ಅಲಹಾಬಾದ್ ಫೆ, 11—ಕ್ಯಾಪ್ಟನ್ ಲಕ್ಷ್ಮಿಯವರು ತಾವು ಬರ್ಮಾಸರ್ಕಾರದ ಪ್ರೆಸಿಡಿಯಾಗಿರುವುದಾಗಿಯೂ, ತಮ್ಮನ್ನು ಸ್ವದೇಶಕ್ಕೆ ಕರೆಸಿಕೊಳ್ಳಲು ಪ್ರಯತ್ನಿಸಬೇಕೆಂದೂ ಭಾರತ ಮುಖಂಡರಲ್ಲೂ ಪತ್ರಿಕೆಯವರಲ್ಲೂ ವಿನಂತಿ ಮಾಡಿಕೊಂಡಿರುವರು.

ಂ ಂ

ಮದರಾಸು ಫೆ 11 — ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ನೀಲಗಿರಿಯಲ್ಲಿ ನಡೆಸಬೇಕೆಂದಿದ್ದ ಕುದುರೆ ಜೂಜನು ನನ್ನಾ ಮಾಡಲು ನಿರ್ಧರಿಸಲಾಗಿದೆ ಅದರ ಬದಲು ಮದರಾಸಿನಲ್ಲೇ 3 ದಿನ ಹೆಚ್ಚಾಗಿ ಜೂಜು ನಡೆಸಲು ಪ್ರಯತ್ನಿಸುತ್ತಿರುವುದಾಗಿ ತಿಳಿಯಬಂದಿದೆ.

ಂ ಂ

ಲಂಡನ್ ಫೆ, 12—ಅಮೇರಿಕಾದಲ್ಲಿರುವ ಆಟಂ ಫ್ಯಾಕ್ಟರಿಯನ್ನು ಒಬ್ಬ ಬ್ರಿಟಿಷ್ ಅಥವಾ ಯೂರೋಪಿಯನ್ ರಸಾಯನ ಶಾಸ್ತ್ರಜ್ಞನು ನೋಡಿಲ್ಲವೆಂದು ಪ್ರೊ|| ಲಾಸ್ಕಿಯವರು ಹೇಳಿರುವುದು-ಲಾರ್ಡ್ ರಾಜಕೀಯದಲ್ಲಿ ಆಶ್ಚರ್ಯವನ್ನುಂಟುಮಾಡಿದೆ.

ಂ ಂ

ಟಿರ್ಯಸ್ಪಿಕ್ ಫೆ. 12—ಒಳಮಂಗೋಲಿಯಾದಲ್ಲಿ ರಷ್ಯಾ ಸಾಮ್ರಾಜ್ಯಂತರ್ಗತ ರಾಜ್ಯಭಾರ ಸ್ಥಾಪನೆ ಎಪಾರಾಡುಗಳು ನಡೆಯುತ್ತಿರುವುದೆಂದು ಹೇಳಲಾಗಿದೆ.

ಹೊಸ ತರಹದ ಅಕ್ಕಿ

ಹಸೀ ಅಕ್ಕಿ, ಕುದುಬಲಕ್ಕಿ ಈ ಎರಡೂ ಈಗ ಇವೆ. ಭತ್ತವನ್ನು ಬೇಯಿಸಿ ಕುಟ್ಟಿದಲ್ಲಿ ಕುದುಬಲಕ್ಕಿಯಾಗುತ್ತವೆ ಅದರೆ ಅನುಭವಿಕದವರು ಹೊಸ ಅಕ್ಕಿಯನ್ನು ಕಂಡು ಹಿಡಿದಿರುವರು. ನೀರಿನಲ್ಲಿ ಲೇಯಿಸದೆ ಆವಿಯ ಮೇಲೆ ಬೇಯಿಸಿದಲ್ಲಿ ಅದರಲ್ಲಿಯ ವಿಟಮಿನ್ನುಗಳು ಒಳಗಿನ ಕಾಳಿಗೆಲ್ಲಾ ಪ್ರಸರಿಸಿ ಕುಟ್ಟಿದಾಗ ಸ್ವಲ್ಪವೂ ನೃಥಾ ಆಗುವುದಿಲ್ಲವಂತೆ. ಈ ಹೊಸ ಮಾದರಿ ಅಕ್ಕಿಯನ್ನು ಅಡಿಗೆ ಮಾಡುವುದು ಸುಲಭವಂತೆ. ತಯಾರಿಸಿದ ಅನ್ನವು ನೋಡಲು ಕೂಡಾ ಸೊಂಪಾಗಿರುವುದಂತೆ ಅಲ್ಲದೇ ಈ ಬಗೆಯ ಅಕ್ಕಿಯನ್ನು ಎರಡು ವರ್ಷಗಳವರೆಗೆ ಕೆಡವಂತೆ ಇಟ್ಟರಬಹುದಂತೆ. (ಶ್ರೀ)

ಶ್ರೀ ಸುಭಾಷ್ ಬೋಸ್

ನೇತಾಜಿ ಸುಭಾಷ್‌ಚಂದ್ರ ಬೋಸರು 1951 ರಲ್ಲಿ ಪುನಃ ಕಾಣಿಸಿಕೊಳ್ಳುವರಂತೆ. 1947 ರಲ್ಲಿ ಮೂರನೇ ಜಾಗತಿಕ ಸಂಗ್ರಾಮವು ತೊಡಗುವುದು. ಜಾಗತಿಕ ಇತಿಹಾಸದಲ್ಲಿ ಅತ್ಯಂತ ದುರ್ಭಾಗಿ ವರ್ಷವಾಗುವುದು ಆ ಇಸವಿ. 1948 ರಲ್ಲಿ ಭಾರತಕ್ಕೆ ಪೂರ್ಣ ಸ್ವಾತಂತ್ರ್ಯ ದೊರೆಯುವುದು. ಬೋಸರ ಅವಸಾನವಾಗುವುದು ಭಾರತದಲ್ಲೇ 1951 ರಲ್ಲಿ ಇಂಡಿಯನ್ ರಿಪಬ್ಲಿಕಿನ ಅಧ್ಯಕ್ಷರಾಗಿಯೇ ಅವರು ಭಾರತಕ್ಕೆ ವಾಪಸಾಗುವರು ಎಂಬುದಾಗಿ ದೈನಿಕ ವಸುಮತಿ ಎಂಬ ಕಲ್ಕತ್ತಾ ಪತ್ರಿಕೆಯಲ್ಲಿ ಭವಿಷ್ಯ ಪ್ರಕಟವಾಗಿದೆ.

ಶ್ರೀ ಸ್ವಾಮಿ ವಿವೇಕಾನಂದರು ಹುಟ್ಟಿದ ಮನೆ

'ಇಲ್ಲಿ 1867 ರಲ್ಲಿ ಶ್ರೀ ಸ್ವಾಮಿಗಳವರು ಜನ್ಮವೆತ್ತಿದರು' ಎಂಬ ಶಿಲಾಶಾಸನವನ್ನು ಅತಸು ಹುಟ್ಟಿದ ಮನೆಗೆ ಹಾಕಲು ಬಂಗಾಳಾ ಸರ್ಕಾರದವರು ನಿರ್ಧರಿಸಿರುವರು.

ಜಾವಾದಲ್ಲಿ ಎಲ್ಲಿ ನೋಡಿದರೂ ಹಿಂದೂ ಸಂಸ್ಕೃತಿಯೇ. ಅಲ್ಲಿಯ ಜನರು ರಾಮಾಯಣ ಮಹಾಭಾರತಗಳನ್ನು ಚನ್ನಾಗಿ ಅರಿತಿದ್ದಾರೆ ಎಂದು ಮಾಹಿಲಾಲ್ ದೇಶಾಯಿಯವರು ನುಡಿದಿರುವರು.

ವಿವಿಧ ವೃತ್ತಾಂತ

ನವ ದೆಹಲಿ ಫೆ. 14— 1956-57 ರಲ್ಲಿ ಪಾವತಿಯಾಗುವ ಶೇಕಡ 3 ದರದ 29 ಕೋಟಿ ರೂಪಾಯಿ ಸಾಲವನ್ನು ಭಾರತ ಸರಕಾರವು ತೆಗೆಯುವುದಾಗಿದೆ.

೦ ೦

ಭಾರತದ ಆಹಾರ ಪರಿಸ್ಥಿತಿ ಬಗ್ಗೆ ಅಂಕಿ ಅಂಶ ಸಂಗ್ರಹಿಸಲು ಅಮೇರಿಕಾ ಸ್ಟೇಟ್ ಇಲಾಖೆ ಯತ್ನಿಸಿದೆ.

೦ ೦

ಬೊಂಬಾಯಿ ಫೆ, 14—ಬ್ರಿಟನ್ನಿನ ವಾಗ್ದಾನಗಳಲ್ಲಿ ನಂಬಿಕೆ ಇಲ್ಲ ಎಂದು ಮಿಸಸ್ ಅರಣ್ ಅಸಾಫ್ ಅಲಿಯವರು ಮಾಡಿದ ಭಾಷಣದಲ್ಲಿ ತಿಳಿಸಿದರು.

೦ ೦

ನಾಗಪುರ ಫೆ, 13—ಗಾಂಧೀಜಿಯವರು ತಾವು ದಕ್ಷಿಣ ಆಫ್ರಿಕಾಕ್ಕೆ ಹೋಗಲು ಇಚ್ಛೆ ಪಡುವುದಿಲ್ಲವೆಂದು ಡಾ॥ ಖಾರೆಯವರಿಗೆ ತಿಳಿಸಿದಂತೆ ವರ್ತಮಾನ.

೦ ೦

ಒರುವ ವಾರ ಭಾರತದ ಆಹಾರ ನಿಯೋಗದವರು, ಭಾರತ ಕಾರ್ಯದರ್ಶಿ ಲಾರೆನ್ಸರಿನ್ನು ಭೇಟಿಮಾಡುವರು.

೦ ೦

ಲಂಡನ್ ಫೆ, 14—ಸ್ವತಂತ್ರಭಾರತದ ರಕ್ಷಣೆ ವಿಷಯದಲ್ಲಿ ಆಸ್ಟ್ರೇಲಿಯವರು ಮುಖ್ಯ - ಸೇನಾಧಿಪತಿಯೊಡನೆ ಮಾತು ಕತೆ ನಡೆಸುತ್ತಿರುವರೆಂದರು.

೦ ೦

ಬೆಂಗಳೂರು ಫೆ, 14—ಸಂಸ್ಥಾನದಲ್ಲಿ ತರುತು ಕಾರ್ಯಕ್ರಮ ಕೈಗೊಳ್ಳದಿದ್ದರೆ 5000 ಮಂದಿ ಗತ ಪ್ರಾಣರಾಗವರೆಂದು ಡಾ॥ ಬಿ॥ ಶ್ರೀ ನಿಜಲಿಂಗಪ್ಪನವರು ಪತ್ರಿಕೋದ್ಯೋಗಿ ಸಮ್ಮೇಳನದಲ್ಲಿ ಹೇಳಿದರೆಂದು ತಿಳಿಯಬಂದಿದೆ.

೦ ೦

ಲಂಡನ್ ಫೆ, 15—ಭಾರತವನ್ನು ಕ್ಷಾಮದಿಂದ ರಕ್ಷಿಸಿರೆಂದು ಕಾಮನ್ಸ್ ಸಭೆಗೂ ಮತ್ತು ಸರಕಾರಕ್ಕೂ ಆಹಾರ ಚರ್ಚೆ ಸಂಬಂಧದಲ್ಲಿ ಪಾರ್ಲಿಮೆಂಟರಿ ನಿಯೋಗದ ಸದಸ್ಯರಾಗಿದ್ದ ವಿ॥ ಸಿಕಲ್‌ಸನ್ನರು ಹೇಳಿದರು.

ಸತ್ಯವಾದಿ

ಸತ್ಯವಾದಿ ಸೋಮವಾರದ ಸಂಚಿಕೆಗೆ ಎಲ್ಲಾ ಊರುಗಳಲ್ಲೂ ವಿಜಂಟರು ಬೇಕಾಗಿದ್ದಾರೆ. ವಿಷಯಗಳಿಗೆ ಬರೆಯಿರಿ. ಅಂಚೆ ವೆಚ್ಚ ಸೇರಿ ಪರಸ್ಥಳಕ್ಕೆ 1-12-0

ಮ್ಯಾನೇಜರ್, ಸತ್ಯವಾದಿ
ಚಾಮರಾಜಪುರಂ, ಮೈಸೂರು

ಬ್ರಹ್ಮಚರ್ಯ

'ಬ್ರಹ್ಮಚರ್ಯದಂಥ ಆನಂದಕರವಾದ ವಿಷಯವು ಈ ಜಗತ್ತಿನಲ್ಲಿ ಮತ್ತೊಂದಿಲ್ಲ. ಅದನ್ನು ಪಾಲಿಸಲಿಕ್ಕೆ ಹತ್ತಿದ್ದರಿಂದ ನನಗೆ ಸತ್ಯಾಗ್ರಹವೂ, ಸತ್ಯಗ್ರಹದಶೋಧನೆಯೂ ಗೊತ್ತಾಗಿ ಹತ್ತಿದುವು'. ಮಹಾತ್ಮಾ ಗಾಂಧಿ

ಬ್ರಹ್ಮಚರ್ಯ ರತ್ನವನು ಪ್ರೇಮದಿಂದ ಪೊರೆಯುವಾ.
ಬ್ರಹ್ಮಪದವಿಯನ್ನು ಪೊಂದಿ ಶಾಂತಿ ಸುಖದಿ ನಲಿವಾ.
ಬ್ರಹ್ಮಚರ್ಯದಲ್ಲಿ ಸತ್ಯ ಜಪವು ತಪವು ಇರುವದು.
ಬ್ರಹ್ಮಚರ್ಯದಲ್ಲಿ ಶ್ರೇಷ್ಠವಾದ ತೀರ್ಥ ವಿರುವದು.
ಬ್ರಹ್ಮಚರ್ಯದಲ್ಲಿ ಧೈರ್ಯ ಶೌರ್ಯ ಶಕ್ತಿ ಇರುವದು.
ಬ್ರಹ್ಮಚರ್ಯದಲಿ ಪರಮ ಪುಣ್ಯಬಲವು ಇರುವದು.
ಬ್ರಹ್ಮಚರ್ಯದಲ್ಲಿ ನೀತಿ ನಿರ್ಮಲತ್ವ ವಿರುವದು.
ಬ್ರಹ್ಮಚರ್ಯದಲ್ಲಿ ಸಕಲ ಸ್ವಾತಂತ್ರ್ಯ ವಿರುವದು.
ಬ್ರಹ್ಮಚರ್ಯದಿಂದ ರಾಜಭೋಗಭಾಗ್ಯ ದೊರೆಯುವುದು.
ಬ್ರಹ್ಮಚರ್ಯದಿಂದ ಜ್ಞಾನಶಕ್ತಿ, ತಾನೆ ದೊರೆಯುವುದು.
ಬಿಂದು ಕಾದ ಮನುಜ ಲೋಕಕೆಲ್ಲ ವಂದ್ಯನೆನಿಪನು.
ಚಂದ್ರನಂತೆ ಪೂರ್ಣ ಕಾಂತಿಯಿಂದ ಹೊಳೆಯುತಿರುವನು.
ತರುಣಿ ತರುಣರೆಲ್ಲ ಮುದದಿ ಬ್ರಹ್ಮಚರ್ಯ ಕಾಯುವಾ.
ಶರಣರಾಗಿ ಸತ್ಯ ಪ್ರೀತಿ ಶಾಂತಿ ಸುಖವ ಪಡೆಯುವಾ.
ಪ್ರಹ್ಲಾದಚರ್ಯ ವ್ರತವನ್ನು ಮನದಿ ಮುದದಿ ನೆನೆಯುವಾ.
ಬ್ರಹ್ಮಚರ್ಯದಿಂದ ನಡೆದು ಹಾಡಿ ಹಾಡಿ ಕುಣಿಯುವಾ.
ಅಣ್ಣ ಒಸವ ದೇವರನ್ನು ಭಕ್ತಿಯಿಂದ ನಮಿಸುವಾ.
ಅಕ್ಕ ಮಾದೇವಿಯವರ ಚರಣಕಮಲ ಕೆರಗುವಾ,
ಬಾಲ ಬ್ರಹ್ಮಚಾರಿ ಕೃಷ್ಣನನ್ನು ಮನದಿ ನೆನೆಯುವಾ.
ಮಾಳ ವರಡಿ ಹನುಮನನ್ನು ಪ್ರೀತಿಯಿಂದ ನಮಿಸುವಾ.
ಬ್ರಹ್ಮಚರ್ಯ ರತ್ನವನ್ನು ಪ್ರೇಮದಿಂದ ಪೊರೆಯುವಾ.
ಬ್ರಹ್ಮಪದವಿಯನ್ನು ಪೊಂದಿ ಸುಖದಿ ನಲಿಯುವಾ.

ಸಂದೇಶ

ಪಾರ್ಲಿಮೆಂಟ್ರಿ ಪ್ರಾತಿನಿಧ್ಯದ ನಿಕ್ಲಾಸ್ ಶ್ರೀಮತಿ ಭಟರ್ಜಿಯೊಡನೆ

(ಮೊದಲನೇ ಪುಟದಿಂದ)

ದಿನ ನಿತ್ಯವೂ ಸ್ವಲ್ಪ ಸ್ವಲ್ಪವಾಗಿ ತಿಳಿದು ಕೊಳ್ಳಿರಿ ಲಂಚದ ಹಣ್ಣು ರೂಪನೆಲ್ಲವೂ ಗೊತ್ತಾಗುತ್ತದೆ. ಅದೇನು ಮಹಾ? ಎಂದು ಉದಾಸೀನರಾಗಬೇಡಿರಿ ಅದು ಸರ್ವವ್ಯಾಪಿಯಾಗಿದ್ದರೂ ಈವರೆಗೆ ಯಾರಿಗೂ ಸಿಕ್ಕಲಿಲ್ಲ ಜಪ, ತಪ, ಹೋಮ, ದಾನ, ಅರ್ಜನೆ, ಏನು ಮಾಡಿದರೂ ಅದರ ರೂಪ ಆಕಾರ ಹಿಳಿಗೆ ಎಂದು ಹೇಳುವುದು ಯಾರಿಂದಲೂ ಸಾಧ್ಯವಾಗಲಿಲ್ಲ. ನಮ್ಮ ಘನ ಸರ್ಕಾರದವರು ಅದನ್ನು ಕಂಡು ಹಿಡಿಯುವುದಕ್ಕಾಗಿ ಕೋಟ್ಯಾನುಕೋಟಿ ಹಣವನ್ನು ದೇಶದಿಂದ ಹೊರದೂಡುವುದಕ್ಕಾಗಿ ಬೇಕಾದಷ್ಟು ಪ್ರಯತ್ನಗಳನ್ನು ಮಾಡಿದರು ಮಾಡುತ್ತಲೇ ಇದ್ದಾರೆ ಆದರೆ ತಾನೆ ಏನು? ಅದನ್ನು ಪ್ರತ್ಯಕ್ಷಮಾಡಿ ಅದರ ಜ್ಞಾನವನ್ನು ಸಂಪಾದಿಸಲಿಕ್ಕೆ ಯಾರಿಂದಲೂ ಸಾಧ್ಯವಿಲ್ಲ. ಅದೇನು ದೇವರೋ ದೆವ್ವವೋ ಒಂದೂ ಗೊತ್ತಾಗುವುದಿಲ್ಲ ಆದರೂ ಅದೆಲ್ಲವೂ ನಮ್ಮ ಮಹಾಗ್ರಂಥದಲ್ಲಿವೆ. ಅದನ್ನು ವಿವರಿಸಬೇಕಾದರೆ ನನ್ನಂಥಾ ಮಹಾ ಜ್ಞಾನಿಯೇ ಇರಬೇಕು. ಕೊಂಚ ಕೊಂಚವಾಗಿ ಹೇಳುತ್ತಾ ಇರುತ್ತೇನೆ. ಸಾವಧಾನವಾಗಿ ಸ್ವಸ್ಥ ಮನಸ್ಸಿನಿಂದ ಕೇಳಿರಿ.

"ಮಲ್ಲ"

At Ranjit

TAQDEER

ತಾ॥15—2—46ರಿಂದ

ತಕದೀರ್

ನಾಗಿಣ್ಣ, ಮೋತಿಲಾಲ್, ಚಾರ್ಲಿ

ಹಸ್ಯ ಬೆಟ್ಟದಪುರದ
ಹೊಗೆಸೊಪ್ಪಿನಿಂದ ತಯಾರಾದ

— ಉಂಡೇ ನಶ್ಯ —

ಇಲ್ಲಿ ದೊರೆಯುತ್ತೆ

ರಾವಂದೂರ್ ವೀರಶೆಟ್ಟಿ & ಸನ್ಸ್
ಶಿವರಾಂಪೇಟೆ ಮೈಸೂರು.

2 nd Week
At Opera —

ಪರಂಜ್ಯೋತಿ

ವಿ. ಎ. ಚೆಲ್ಲಪ್ಪ ಸಿ. ಪಿ. ರಾಜಲಕ್ಷ್ಮಿ
ಬಾಲ ಸುಬ್ರಹ್ಮಣ್ಯಂ ಜಯಗೌರಿ
ಕೃಷ್ಣ ಮಧುರಂ ಪಾತ್ರದಾರರು

ಮುಂದಿನ ವಿನೋದ

ಸುರೇಂದ್ರ, ಮೇಘತಾಬ್
ಪಾತ್ರವಹಿಸಿರುವ

ವಿಶ್ವಾಸ್

ಸುಖ ಆರೋಗ್ಯ ಆನಂದದಾಯಕ



ಜೀವಿತಕ್ಕೆ

ಸ್ವೀಮರ್ ಮಾರ್ಕಿನ ಉತ್ಕೃಷ್ಟ
ಹಿಂಗಿನ ಪುಡಿ ಉಪಯೋಗಿಸಿ.

ಈ ಹಿಂಗಿನ ಪುಡಿಯು ಅತ್ಯಂತ ಪರಿಶುದ್ಧವಾದುದು. ನೀರನ್ನು ಸೇರಿಸದೇ ತಯಾರಿಸಲ್ಪಟ್ಟಿದೆ. ಅತಿ ಘನವಾದ ಗುಣವುಳ್ಳದ್ದು. ಎಲ್ಲಾ ಸನಾತನ ಸಂಸಾರಗಳಲ್ಲಿ ಉಪಯೋಗಿಸಲು ಅರ್ಹವಾದುದು. ಒಂದು ಚಿಕ್ಕ ಚಿಟಿಕೆಯಷ್ಟನ್ನು ತಯಾರಿಸುತ್ತಿರುವ ಆಹಾರ ಪದಾರ್ಥಗಳಲ್ಲಿ ಹಾಕಿದಲ್ಲಿ ದೀರ್ಘವಾದ, ಸುಮನೋಹರವಾದ ವಾಸನೆಯನ್ನು ಕಲ್ಪಿಸುವುದಲ್ಲದೆ, ಹೆಚ್ಚು ರುಚಿಯನ್ನುಂಟು ಮಾಡುತ್ತದೆ. ಎಲ್ಲಾ ಶರೀರ ವ್ಯಾಧಿಗಳಿಗೂ ಒಂದು ಸಂಪೂರ್ಣ ಔಷಧದಂತಿದೆ. ಒಂದು ಸಾರಿ ಉಪಯೋಗಿಸಿದ್ದಲ್ಲಿ ನಂಬಿಕೆಯನ್ನುಂಟು ಮಾಡುವುದಲ್ಲದೆ, ಸದಾ ಅದನ್ನು ಉಪಯೋಗಿಸುವಂತೆ ಮನಗೊಳಿಸುವುದು. ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ಒಂದು, ಅರ್ಧ, ಕಾಲು ಪೌಂಡು ಮತ್ತು ಒಂದು ಪಲಂ ಪ್ಯಾಕೆಟ್ಟುಗಳಲ್ಲಿ ದೊರೆಯುತ್ತದೆ. ಬೆಲೆ ಒಂದು ಪೌಂಡಿಗೆ ರೂ. 3-8-0 ಮಾತ್ರ.

ನಮ್ಮ ಸುಘಂದ ಅಡಿಕೆಪುಡಿ ಒಂದು ವೈಶಿಷ್ಟ್ಯ.

ನಮ್ಮ ಶ್ರೀ ಓಂ ಗುರುತಿನ ಕೇಸರಿ ಅತ್ಯಂತ ಪರಿಶುದ್ಧವಾದ ಖಾತರಿಯಾದುದು. ವಿವರಗಳಿಗೆ ಮತ್ತು ಸ್ಯಾಂಪಲಿಗೆ ಬರೆಯಿರಿ —

ವಲ್ಲಭದಾಸ್ ತೇಜ್‌ಪಾಲ್,
(ಹಿಂಗು, ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)
೧೪. ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸು.

ಉಡುಪುಗಳನ್ನು ಅತಿ ಚೊಕ್ಕಟವಾಗಿ ಒಗೆದು
— ಶುಭ್ರಮಾಡುವ ಸಾಧಕ —

ಮೈಸೂರು ಸಾಬೂನನ್ನು ಉಪಯೋಗಿಸಿದ ಹೊರತು, ಆಶ್ಚರ್ಯಕರವಾದಷ್ಟು ಮಟ್ಟಿಗೆ ಅದರಲ್ಲಿ ಅಡಗಿರುವ ನಿರ್ಮಲೀಕರಣಶಕ್ತಿಯನ್ನು ತಿಳಿಯಲಾರಿರಿ;
ಈ ಸಾಬೂನನ್ನು ಇವತ್ತು ಉಪಯೋಗಿಸಿ ನೋಡಿ;
ಅದರ ಪ್ರತಿಫಲವನ್ನು ಕಂಡು ನೀವೇ ಬೆರಗಾಗುವಿರಿ.

ಮೈಸೂರು
ಸಾಬೂನು

ಕೊಳಕು ಬಟ್ಟೆಗಳನ್ನು
ಸ್ವಚ್ಛಗೊಳಿಸುವುದು

ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ, ಬೆಂಗಳೂರು.

ರಕವದಿಗೆ — ಧಾತುಪುಷ್ಟಿಗೆ

ಸಂಜೀವನ

ಶಕ್ತಿಸುಧಾ

ಬೆಲೆ ಡಬ್ಬಿಗೆ ಕ್ಕೆ ರೂ. ೧.೪-೦

ವಿಳಾಸ— ಶಕ್ತಿಸುಧಾ, ೧೦೬೭ ಚಾಮರಾಜಪುರಂ, ಮೈಸೂರು

Edited, Printed and published by M. S. Krishna Rao, at the Satvavadi Press, Chamareja Agrahar, Mysore

For Good Printing
L. N. Press
Sriramp et MYSORE

ಒಬ್ಬ ಹೆಂಗಸಿಗಾಗಿ ಇಬ್ಬರ ಜಗಳ

ಕಳೆದ ವಾರ ಲಕ್ನೋದಲ್ಲಿ ಮಧ್ಯ ವಯಸ್ಸಿನ ಒಬ್ಬ ಮನುಷ್ಯನೂ ಒಬ್ಬ ತರುಣಿಯೂ ಒಂದು ಟಾಂಗಾದಲ್ಲಿ ಹೋಗುತ್ತಿರುವಾಗ, ಹೈದರ್ ಹುಸೆಕ್ ಎಂಬುವನು ಅದನ್ನು ತಡೆದನು. ಟಾಂಗಾ ನಿಂತೊಡನೆ ಅದರಲ್ಲಿದ್ದ ಹೆಂಗಸನ್ನು ಹಿಡಿದು ಜಗ್ಗಿ ಇಳಿಸಿದನು. ಅಷ್ಟರಲ್ಲಿ ಅಹಮದ್ ಹುಸೇನನೂ ಟಾಂಗಾದಿಂದಿಳಿದು ಕತ್ತಿಯನ್ನು ಹಿರಿದು ಜಳುಪಿಸುತಾ ಹೈದಂನ ಮೇಲೆ ಹೋದನು. ಇಬ್ಬರೂ ಕತ್ತಿಗಳನ್ನು ಹಿಡಿದು ಹೋರಾಡುವುದಕ್ಕೆ ಸಿದ್ಧವಾಗುತ್ತಿರುವಷ್ಟರಲ್ಲಿಯೇ ಪೋಲೀಸರು ಬಂದು ತಡೆದು ಇಬ್ಬರನ್ನೂ ಬಂಧಿಸಿದರು. ಆ ಹೆಂಗಸು ತನ್ನ ಹೆಂಡತಿಯೆಂದೂ, ತನ್ನ ಕಕ್ಕನಾದ ಅಹಮದ ಹುಸೇನನು ಅವಳನ್ನು ಓಡಿಸಿಕೊಂಡು ಹೋಗುತ್ತಿದ್ದನೆಂದೂ ಹೈದರ್‌ಹುಸೆಕ್ ತಕರಾರುಕೊಟ್ಟ [ಲೊ

ಸೂರ್ಯಗ್ರಹಣ

ಬರುವ ಮೇ ತಿಂಗಳಲ್ಲಿ ಒಂದು ಸೂರ್ಯಗ್ರಹಣ ನಡೆಯುವದಿದೆ ನೈರುತ್ಯ ಏಷ್ಯಾದಿಂದ ಉತ್ತರ ಅಮೇರಿಕಾ ಪಶ್ಚಿಮ ತುದಿಯವರೆಗೂ 5320 ಮೈಲು ವೃತ್ತಭಾಗದಲ್ಲಿ ಈ ಗ್ರಹಣವು ದೃಗ್ಗೋಚರಿಸುವುದು. ಗ್ರಹಣ ಕಾಲದಲ್ಲಿ ಭೂಗೋಲ ಕುರಿತಾದ ಮಹತ್ವದ ರಹಸ್ಯಗಳನ್ನು ಕಂಡುಹಿಡಿಯಲು ಬೇಕಾಗಿ, ಯಿರುಪಿಸಿದ ಸಿದ್ಧತೆ ಅಮೇರಿಕಾದಲ್ಲಿ ನಡೆಯುತ್ತಿದೆ ಇತಿಹಾಸದಲ್ಲಿ ಎಂದೂ ಈ ರೀತಿಯ ಸಿದ್ಧತೆ ಈ ಮೊದಲು ನಡೆದುದಿಲ್ಲವೆನ್ನಬಹುದು. [ಪ

.....

ಲಂಡನ್.... ಶ್ರೀಮಂಕಷ್ಟೈರು ಕುದುರೆ ಪಂಥದಲ್ಲಿ ಮೊದಲನೇ ನಾಲ್ಕು ಗೆಲ್ಲುವ ಕುದುರೆಗಳನ್ನು ಮುಂದಾಗಿ ತಿಳಿಸಿ ತನ್ನ 1 ಪೌಂಡು ಬಾಜಿ ಟಿಕೀಟಿಗೆ 10213 ಪೌಂಡುಗಳನ್ನು ಪ್ರೀಸ್ ಎಂಬುವನು ಪಡೆದನು,

ಂ ಂ

ಹಾಂಕಾಂಗ್ .... ಕಲೋನಿಯಲ್ ವಿಚಾರದ ಬ್ರಿಟಿಷ್ ಸ್ಟೇಟ್ ಸೆಕ್ರೆಟರಿ ಲಾರ್ಡ್ ಲಿಸ್ಟೊವೆಲ್ಲರು ಸಭ್ಯ ಪ್ರಪಂಚ ಯುದ್ಧದ ಸಂಭವವಿಲ್ಲವೆಂದಿರುವರು

ಂ ಂ

ಪ್ರಪಂಚದೊಂದಿಗೆ ಶಾಂತಿಯಿಂದಿರಬೇಕೆಂಬುದೇ ರಷ್ಯದ ಬಯಕೆ ಎಂದು ರಷ್ಯ ರಾಯಭಾರಿ ನ್ಯೂಯಾರ್ಕಿನಲ್ಲಿ ಸಾರಿದರು.

ಗಾಂಧೀಜೀ ದಶಾವತಾರ

ಮತ್ಸ್ಯ— ಜೀರ್ಣಮತೋದ್ಧಾರ

ಕೂರ್ಮ.... ದೀನಸಂರಕ್ಷಣೆ

ವರಾಹ....ಪತಿತಲೋಕಸಮುದ್ಧರಣೆ

ನಾರಸಿಂಹ—ಅಹಂಕಾರ ವಿಧ್ವಂಸನೆ

ವಾಮನ.... ವಿಶ್ವವಿಕ್ರಮಣ

ಪರಶುರಾಮ....ನಿರಂಕುಶತಾ ನಿರ್ಮೂಲತೆ

ಶ್ರೀರಾಮ — ಧರ್ಮರಾಜ್ಯಪ್ರತಿಷ್ಠಾಪನೆ

ಶ್ರೀ ಕೃಷ್ಣ— ಕರ್ಮಯೋಗ

ಬೌದ್ಧ— ಸ್ವರಾಜ್ಯಪ್ರದಾನ – ಜೀವ ಕಾರುಣ್ಯ

ಕಲ್ಕಿ .....ಸತ್ಯಯುಗ ಸಂಸ್ಥಾಪನೆ

ಭಾರಿ ಅಣೆಕಟ್ಟು

ಸೋನ್ ನದಿಗೆ ಉಪನದಿಯಾದ ರೇಣುಕಾ ನದಿಗೆ ಪಿಪೇರಿ ಎಂಬ ಸ್ಥಳದಲ್ಲಿ ಯು ಪಿ ಸರಕಾರವು ಹದಿನಾರೂಕಾಲು ಕೋಟಿ ರೂ. ಗಳ ವ್ಯಯದಲ್ಲಿ 280 ಅಡಿ ಎತ್ತರ 3100 ಅಡಿ ಉದ್ದವಿರುವ 180 ಚದುರ ಮೈಲಿ ವಿಸ್ತೀರ್ಣದಲ್ಲಿ ನೀರು ನಿಲ್ಲಬಲ್ಲ ಅಣೆಕಟ್ಟನ್ನು ಕಟ್ಟಲಿರುವರು, ಇದರಿಂದ 132000 ಕಿಲೋ ವ್ಯಾಟರುಗಳ ವಿದ್ಯುಚ್ಛಕ್ತಿಯೂ ಉತ್ಪನ್ನವಾಗುವುದು.

ಭಂಗಾರದ ಕಳವು

ಲಂಡನ್ನಿನ ಫಿನ್ಸ್‌ಬರಿ ಜಿಲ್ಲೆಯಲ್ಲಿ ಫ್ಲಿರ್ವ ಪರಾಫೀ ಅಂಗಡಿಯ ಮೇಲೆ ಹಲ್ಲೆಮಾಡಿ ಸುಮಾರು 50 ಸಾವಿರ ಪೌಂಡು ಬಂಗಾರ ಕಳವುಮಾಡಿರುವರು

ಪ್ರಜೆಗಳಿಗೇ ಕೀರ್ತಿ

ಹೈದರಾಬಾದಿನಲ್ಲಿ ಶ್ರೀ ಮುನಷಿಯವರು ಮೈಸೂರು ಮುಖ್ಯ ಮಂತ್ರಿ ಶ್ರೀ ಕೆ ಸಿ ರೆಡ್ಡಿಯವರ ಗೌರವಾರ್ಥವಾಗಿ ನಡೆಸಿದ ಸತ್ಕಾರಕೂಟದಲ್ಲಿ 'ಮೈಸೂರಿನಲ್ಲಿ ಪ್ರಜಾ ಸರಕಾರ ಸ್ಥಾಪನೆಯಾಗಿರುವದು ಮೈಸೂರು ಪ್ರಜೆಗಳ ಮಹಾತ್ಮಾಗದಿಂದಲೆಂದೂ ಅವರಿಗೇ ಕೀರ್ತಿ ಸಲ್ಲುತಕ್ಕದೆಂದು ಹೇಳಿದರು.

ಪಾಕಿಸ್ಥಾನದಲ್ಲಿ ಮುಷ್ಕರವೇ !

ಪಾಕಿಸ್ಥಾನ ಸರಕಾರದ ನೌಕರರು ಕರಾಚಿಯಲ್ಲಿ ಸಭೆ ಸೇರಿ ತಮ್ಮ ಕೊರತೆಗಳನ್ನು ಸರಕಾರವು ತೀವ್ರವೇ ಪೂರೈಸದಿದ್ದರೆ ಇದೇ ಮಾರ್ಚ್ 27 ರಿಂದ ಮುಷ್ಕರ ಹೂಡಲು ನಿರ್ಧರಿಸಿದಾರೆ. ಅವರ ಕೊರತೆಗಳಲ್ಲಿ ವೇತನ ಹೆಚ್ಚಿಸುವುದೂ ನೌಕರರನ್ನು ಕಡಮೆಮಾಡಬಾರದು ಎಂಬ ಮೊದಲಾದವಕ್ಕೆ ಸಂಬಂಧಿಸಿದೆ

ನವಡೆಹಲಿ ಮಾ 21— ಹೈದರಾಬಾದಿನ ಭಾರತ ಏಜೆಂಟು ಜನರಲ್ ಮುನಷಿಯವರು ಮತ್ತು ಭಾರತ ಉಪ ಮುಖ್ಯ ಮುಖ್ಯ ಮುಂತ್ರಿ ಸಂದಾರ ಪಟೇಲರೂ ಭಯಂಕರ ಪರಿಸ್ಥಿತಿಯಲ್ಲಿರುವ ಹೈದರಾಬಾದು ಪರಿಸ್ಥಿತಿ ಬಗ್ಗೆ ಮಾತುಕತೆ ನಡೆಸಿದರು. ರಜಾಕರರ ಚಟುವಟಿಕೆ ದಕ್ಷಿಣ ಭಾರತಕ್ಕೆ ಭಯೋತ್ಪಾತಕವಾಗಿದೆಯೆಂದರು

ಂ ಂ

ನವದೆಹಲಿ .... ಹೈದರಾಬಾದಿನಲ್ಲಿ ಶಸ್ತ್ರಾಸ್ತ್ರ ತಯಾರ್ಮಾಡಲ್ಪಡುತ್ತಿರುವ ವಿಷಯದಲ್ಲಿ ಏಜೆಂಟುಜನರಲ್ ಹೈದರಾಬಾದು ಸರಕಾರದೊಡನೆ ವಿಚಾರ ನಡೆಸುವಂತೆ ತಿಳಿಸಲಾಗಿದೆಯೆಂದು ಭಾರತ ಪಾರ್ಲಿಮೆಂಟಿನಲ್ಲಿ ಒಂದು ಪ್ರಶ್ನೆಗೆ ಮಹಾಪ್ರಧಾನರು ಉತ್ತರ ವಿತ್ತರು.

ಂ ಂ

451 ಎಕರೆಗಳಷ್ಟು ಫ್ರೆಂಚ್ ಭೂಮಿ ಕಟ್ಟಡಗಳನ್ನು ಮುಚಲಿಪಟ್ಟಣ ಕಲ್ಲಿಕೋಟೆ ಬಾಲಸೂರುಗಳಿಂದ ಭಾರತ ಸರ್ಕಾರ ಪಡೆಯಿತು.

ಂ ಂ

ಬರುವ ವರ್ಷ ಶಾಂತಿನಿಕೇತನದಲ್ಲಿ ವಿಶ್ವಸಮ್ಮೇಳನವನ್ನು ಆಹ್ವಾನಿಸಲು ಪಂ || ನೆಹರು ತೀವ್ರಾಸಕ್ತರಿದ್ದಾರೆ, ಪ್ರೊ || ಈಸ್ಟೀನ್ ಈ ಯೋಚನೆಯನ್ನು ಸ್ವಾಗತಿಸಿದ್ದಾರೆ.

ಂ ಂ

ಶ್ರೀವಸ್ತ್ರಹಾರರಾಜರು ಸಂಸ್ಥಾನರಾಜ್ಯಾಂಗ ಸಭೆಗೆ ಸಂದೇಶ ಕೊಡುವರು.

ಕಾಫಿ ಬೆಲೆಯು ಹತೋಟಿಗೆದುರಕ್ಕೆ ಸರಕಾಲವಿದಲ್ಲವೆಂದು ಕುನ್ನೂರು ಪ್ಲಾಂಟರ್ ಅಸೋಸಿಯೇಷನ್ ಅಧ್ಯಕ್ಷರು ತಿಳಿಸಿದರು.

ಂ ಂ

ನಿಜಾಂರಾಜ್ಯದಲ್ಲಿ ಹಳ್ಳಿಗರನ್ನು ಸಾಲು ನಿಲ್ಲಿಸಿ ವಧಿಸಲಾಗುತ್ತಿದೆ ಗಧವಾಲಿ ರಾಜಕುಮಾರಿ ಬಂಡಿ ನಿಲ್ಲಿಸಿರಜಾಕರು ಅಪಮಾನ ಮಾಡಿದರು.

ಂ ಂ

ಬಿಹಾರಿನಲ್ಲಿ ಜಮೀನ್ದಾರಿ ಪದ್ಧತಿಯನ್ನು ರದ್ದುಮಾಡಲು ರೂ. 140 ಕೋಟಿ ಅಗತ್ಯವಿದೆ

ಂ ಂ

ಬೊಂಬಾಯಿ....ಸೋಷಿಯಲಿಸ್ಟರು ಕಾಂಗ್ರೆಸ್ಸನ್ನು ಬಿಡುವುದು ಕಾಂಗ್ರೆಸ್ಸಿಗೆ ಒಳ್ಳೇದೇ ಆಯಿತೆಂದು ಗೃಹಮಂತ್ರಿ ಮುಂರ್ಜಿ ದೇಸಾಯರು ಹೇಳಿರುವರು.

ಂ ಂ

ಏಪ್ರಿಟ್ 1 ರಿಂದ ಕಾರ್ಡಿಗೆ ೪ ಕವರಿಗೆ 1 ಆಣೆ

ಂ ಂ

ಪೂರ್ವ ಪಂಜಾಬ್ ಪ್ರತಿನಿಧಿಯ ಪಾಂಥಿಕ್ ಪಕ್ಷದ 23 ಸದಸ್ಯರುಗಳಲ್ಲಿ 20 ಮಂದಿ ಸಿಕ್ಖರು ಕಾಂಗ್ರೆಸ್ ಪ್ರತಿಜ್ಞೆಗೆ ಸಹಿ ಹಾಕಿದರು.

ಂ ಂ

ಬರ್ಲಿನ್ ಮಾ 22.... ರಷ್ಯವು ಎಲ್ಲಾ ಪಾಶ್ಚಾತ್ಯ ಮಿತ್ರರೂ ಬರ್ಲಿನ್ ಬಿಟ್ಟು ಹೊರಡಿರೆಂದು ಹೇಳಬಹುದೆಂದು ತಜ್ಞರ ಅಭಿಪ್ರಾಯವಾಗಿದೆ



ಭಾರತವನ್ನು ಬಿಡುತ್ತಿರುವ ಕಡೇ ಬ್ರಿಟಿಷ್ ಸೈನ್ಯ ಪಡೆ

ಪಾಕಿಸ್ತಾನದ ಸ್ಥಿತಿ

ಪಾಕಿಸ್ತಾನವು ಹಿಂದೂಸ್ಥಾನದ ಮೇಲೆ ಆಧಾರ ಪಟ್ಟಿರದೆ ಏಧಿಯಿಲ್ಲ. ಆದಕ್ಕೆ ಬೇಕಾದ ಎದ್ಯುಚ್ಛಕ್ತಿ ಹಿಂದೂಸ್ಥಾನದಿಂದಲೆ ಹೋಗಬೇಕಾಗಿದೆ. ಪಾಕಿಸ್ತಾನವು ಹಿಂದೂಸ್ಥಾನದ ಮೇಲೆ ಯುದ್ಧ ಹೂಡಿದಲ್ಲಿ ಜೋಗೇಂದ್ರ ಪೂರ್ವದಲ್ಲಿ ಸ್ವಿಚ್ ಹಾಕಿದರೆ ಸಾಕು ಪಾಕಿಸ್ತಾನದ ಕರಚರಣಗಳೆಲ್ಲ ಬಂದ್ ಆಗುತ್ತವೆ. ಹಾಗೆಯೇ ಡೊಮಿನಿಯನ್ನಿನವರ ಒಂದು ಬಾಂಬು ಸಾಕು ಸಟ್ಲೆಜ್ ವಾಟರ್ ವರ್ಕ್ಸನ್ನು ಧೂಳಿಪಟ ಮಾಡಿ ಕೆಲವು ದಶಾಬ್ದಗಳವರೆಗೂ ಪಾಕಿಸ್ತಾನವನ್ನು ದುರ್ಭಿಕ್ಷವಾಗಿ ಮಾಡಲು ! (ಮೂ.)

ಂ — ಂ

ಪೋಲೀಸು ಅಧಿಕಾರಿಗೆ ಶಿಕ್ಷೆ

ಕೊಲ್ಲಾಪುರ ಪಾರಂಗಿರೆಯ ಕಾಶೀಬಾಯಿ ಕನ್ನಾರ್ ಎಂಬಾಕೆಯ ಮೇಲೆ ಬಲಾತ್ಕಾರ್ಯ ಮತ್ತು ಹೊಡೆತಗಳನ್ನು ಮಾಡಿದರೆಂದು ಎಚ್. ಬಿ. ಇಂಗವಾಲೆ ಎಂಬ ಪೋಲೀಸ್ ಸಬ್ ಇನ್ಸ್ಪೆಕ್ಟರಿಗೆ ಐದು ತಿಂಗಳ ಶಿಕ್ಷೆ ಮತ್ತು ರೂ. 700 ಜುಲ್ಮಾನೆಯನ್ನು ಕೊಲ್ಲಾಪುರ ಪ್ರಮುಖ ನ್ಯಾಯಾಸ್ಥಾನ ವಿಧಿಸಿದೆ. 1942 ರಲ್ಲಿ ಕಾಶೀಬಾಯಿ ಮಗ ಅಜ್ಞಾತದಲ್ಲಿದ್ದಾಗ ಈ ಪೋಲೀಸ್ ಅಧಿಕಾರಿ ಆಕೆಯನ್ನು ಹೊಡೆದಿದ್ದನು.

ವರ್ತಮಾನ ಸಂಗ್ರಹ

ದೂರಪ್ರಾಚ್ಯ ಹನ್ನೊಂದು ರಾಷ್ಟ್ರಗಳ ಸಮಿತಿ ಜಪಾನ್ ನಿಶ್ಶಸ್ತ್ರೀಕರಣಕ್ಕಾಗಿ ಐದು ಕಾರ್ಯಕ್ರಮಗಳನ್ನು ಕೈಗೊಂಡಿದೆ ಎಂದು ವಾಷಿಂಗ್ಟನ್ ವಾರ್ತೆ.

ಂ ಂ

ಮದರಾಸು — ಗಡಿ ಪೋಲೀಸುಗಿ ಶಸ್ತ್ರಾಸ್ತ್ರ ಸರಬರಾಜು ಮಾಡುವ ಬಗೆ ಮದರಾಸು ಸರ್ಕಾರ ಕೇಂದ್ರ ಸರ್ಕಾರದೊಂದಿಗೆ ವಿಚಾರ ವಿನಿಮಯ ಮಾಡುತ್ತಿರುವುದಾಗಿ ಹೇಳಲಾಗಿದೆ.

ಂ ಂ

ಇದೇ ತಾ || 19 ರಲ್ಲಿ ಚಿಂತಾಮಣಿಯಲ್ಲಿ ಶ್ರೀ ನಾಗದೇವರಸ್ವಾಮಿ ರಥೋತ್ಸವ ಕಾಲದಲ್ಲಿ ಹರಿಜನರು ದೇವಾಲಯ ಪ್ರವೇಶ ಮಾಡಲಡ್ಡಿಯಾಗುತ್ತೆಂದು ಪುಜಾರಿಯು ಮಂತ್ರಿಗಳಿಗೆ ವುಕಾರು ಹೋಗಿದೆ.

ಂ ಂ

ಮದರಾಸು ರೇಸ್ ಕ್ಲಬ್ ನೆಹ್ರೂ ರಾಷ್ಟ್ರೀಯ ಪರಿಹಾರ ನಿಧಿಗೆ ಒಂದು ದಿನದ ಉತ್ಪತ್ತಿಯನ್ನು ಕೊಡಲು ನಿರ್ಧರಿಸಿದೆ.

ಂ ಂ

ಲಂಡನ್ — ಷೇಕ್ಸ್‌ಪಿಯರ್ ರಾಷ್ಟ್ರೀಯ ಸ್ಮಾರಕಕ್ಕಾಗಿ ಬ್ರಿಟಿಷ್ ಸರಕಾರ 1 ಮಿಲಿಯ ಪೌಂಡು ಸಹಾಯ ಮಾಡುವರು

ಂ ಂ

ಬೆಂಗಳೂರು — ರಾಜ್ಯಾಂಗ ಸಭೆಯ 76 ಸ್ಥಾನಗಳಲ್ಲಿ ಕಾಂಗ್ರೆಸಿಗೆ 66 ದೊರೆತಿದೆ.

ಪ್ರಪಂಚಗಲ್ಲೇ ಹೆಚ್ಚು ಹಾಲು ಕೊಡುವ ಬ್ರಿಟಿಷ್ ಹಸು

ಐ ಟಿ ಯಾ ಲ್

ಟ್ರೇಡ್ ITL ಮಾರ್ಕ್

ಐಟಿಯಾಲ್ ಒಂದು ಅದ್ಭುತ ಕ್ರಿಮಿನಾಶಿನಿ. ಗೊತ್ತಾದ ಪ್ರಮಾಣದಲ್ಲಿ ನೀರಿನೊಡನೆ ಬೆರಿಸಿ, ಗಾಯಗಳನ್ನು ತೊಳೆಯುವುದು, ಬಾಯಿಲೆಯವರ ಕೂಡಿಗಳನ್ನು ತೊಳೆಯುವುದು, ಬಟ್ಟೆಗಳನ್ನು ಒಗೆದು ಶುಚಿ ಮಾಡುವುದು. ಇತ್ಯಾದಿ ಕೆಲಸಗಳಿಗೆ ನೆರವಾಗುವ ಸಂಸಾರ ಸೇವಕ.

ಹಿತವಾದ ಇದರ ವಾಸನೆಯು ಮನಸ್ಸನ್ನು ಹರ್ಷಗೊಳಿಸುವುದು.

ಎಲ್ಲಾ ಪ್ರಮುಖ ಔಷಧಿವ್ಯಾಪಾರಿಗಳಲ್ಲಿಯೂ ಬೆಲೆಗೆ ದೊರೆಯುವುದು.

— ತಯಾರಿಕರು —

The Mysore Industrial & Testing Laboratory Ltd.

Malleswaram P. O. Bangalore

ಹೊಸ ಬೆಳೆಯು, ಆರಿಸಿ ತೆಗೆದ, ಪರಿಶುದ್ಧವಾದ

ಶ್ರೀ 'ಓಂ' ಗುರುತಿನ ಕೇಸರಿ

ಈ ಓಂ ಗುರುತಿನ ಕೇಸರಿ ಅತಿ ಪರಿಶುದ್ಧವಾದುದಕ್ಕೆ ಗ್ಯಾರಂಟಿಯಾದುದು. ಸ್ಪೇನಿನ ಕೇಸರಿ ಗಿಡಗಳಲ್ಲಿಯು ಹೂಗಳಿಂದ ಆರಿಸಿ ತೆಗೆದುದಾಗಿದೆ ನಮ್ಮಿಂದ ಸ್ಪೆಷಲ್ಲಾಗಿ ಅಮದು ಮಾಡಲ್ಪಟ್ಟಿರತಕ್ಕದ್ದು. ಬಹು ಹೊಳಪಿನಿಂದಲೂ ಸುವಾಸನೆಯಿಂದಲೂ ಕೂಡಿದುದಾಗಿದೆ ಏನೊಂದೂ ಅಕ್ಕೇಪಣೀಯ ಪದಾರ್ಥಗಳೂ ಸೇರಿಲ್ಲ. ಮತ್ತು ಧಾರ್ಮಿಕವಾಗಿ ಪರಿಶುದ್ಧವಾಗಿದೆ. ದೇವಸ್ಥಾನಗಳಲ್ಲಿಯೂ ಈವರ ಪೂಜೆಗೂ, ಔಷಧಗಳಿಗೂ, ಮತ್ತು ತಿಂಡಿಪದಾರ್ಥಗಳಿಗೂ ಉಪಯೋಗಿಸಲ್ಪಡಲು ಅರ್ಹವಾಗಿದೆಯೆಂದು ಶಿಫಾರಸ್ಸುಮಾಡಲಾಗಿದೆ. ½ ತೋಲಾ, 1 ತೋಲಾ, ಡಬ್ಬಿಗಳಲ್ಲಿಯೂ, ಚಿಲ್ಲರೆಯಾಗಿಯೂ ದೊರೆಯುತ್ತದೆ. ಉಪಯೋಗಿಸಬೇಕಾಗಿ ವಿನಂತಿ.

ವಲ್ಲಭದಾಸ್ ತೇಜ್‌ಪಾಲ್

೧೪ ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸ್.

ಶಕ್ತಿಸುಧಾ

ಶಕ್ತಿಹೀನತೆಗೆ ಸಂಜೀವನ

ಸತ್ಯವಾದಿ

'ಪ್ರಬೋಧ' ಪುಟದಿಂದೊಡಗೂಡಿದ

ಸೋಮವಾರ ಸಂಚಿಕೆ ವಾರ್ಷಿಕಚಂದಾ

ಪರಸ್ಥಳಕ್ಕೆ ಅಂಚೆವೆಚ್ಚ ಸೇರಿ 1-13-0